ಬ) ಹಾಲಾಡಿ ಸಬ್-ಸ್ಟೇಷನ್ ಮಂಜೂರಾಗಿದ್ದು, ಕೆಲಸ ಸ್ಥಗಿತವಾಗಲು ಕಾರಣವೇನು?

ಕ) ಹಾಲಾಡಿ ಸಬ್-ಸ್ಟೇಷನ್ ಕೆಲಸ ಎಂದು ಪೂರ್ಣಗೊಳಿಸಲಾಗುವುದು ಮತ್ತು ಎಂದು ಕಾರ್ಯನಿರ್ವಹಿಸಲು ಪ್ರಾರಂಭಿಸುವುದು?

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಕೆಲಸ ಸ್ಥಗಿತಗೊಂಡಿರುವುದಿಲ್ಲ.

ಆ) ಏಪ್ರಿಲ್ '96ರಿಂದ ನಿರ್ಮಾಣ ಕಾರ್ಯವನ್ನು ಚುರುಕುಗೊಳಿಸಿ, ಮಾರ್ಚ್ 97ರ ಅಂತ್ಯದ ವೇಳೆಗೆ, ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಈ ಸಬ್-ಸ್ಟೇಷನ್ನನ್ನು ಚಾಲನೆಗೊಳಿಸಲು ಉದ್ದೇಶಿಸಿದೆ.

ನಗರ ಪ್ರದೇಶದ ಬಡವರಿಗೆ ಹಸಿರು ಕಾರ್ಡು ವಿತರಣೆ.

638 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರ ಪ್ರದೇಶದಲ್ಲಿಯ ಬಡಜನರಿಗೆ ಹಸಿರು ಕಾರ್ಡನ್ನು ನವೆಂಬರ್ 1ನೇ 1995ರಿಂದ ವಿತರಿಸಲು ಸರ್ಕಾರದವರು ಕ್ರಮ ಕೈಗೊಳ್ಳದಿರಲು ಕಾರಣಗಳೇನು?

ಆ) ರಾಜ್ಯದ ಎಲ್ಲಾ ನಗರಗಳಲ್ಲಿಯೂ ಈ ಯೋಜನೆಗೆ ಅರ್ಹರಾಗುವ ಫಲಾನುಭವಿಗಳು ಎಷ್ಟು, (ನಗರವಾರು ಮಾಹಿತಿ ನೀಡುವುದು).

ಇ) ಸರ್ಕಾರದವರು ಇವರಿಗಾಗಿ ಕೊಡಬೇಕಾದ ಸಬ್ಸಿಡಿ ಹಣ ಎಷ್ಟು?

ಶ್ರೀ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಸಹಾಯಧನಯುಕ್ತ ಆಹಾರಧಾನ್ಯಗಳನ್ನು ನೀಡುವ ಯೋಜನೆಯು ದಿನಾಂಕ 1.11.95ಕ್ಕೂ ಹಿಂದಿನಿಂದಲೂ ಜಾರಿಯಲ್ಲಿದೆ. ಆದೇಶ ಸಂಖ್ಯೆ ಎಫ್ ಸಿ ಎಸ್ 789 ಡಿಆರ್ಎ 95 ದಿನಾಂಕ 14.11.95ರಲ್ಲಿ ಸಹಾಯದನದಡಿ ಆಹಾರಧಾನ್ಯಗಳ ವಿತರಣೆಯನ್ನು ನಗರ ಪ್ರದೇಶಗಳ ಎಲ್ಲಾ ಬಡಜನರಿಗೂ ಒಳಗೊಂಡಂತೆ ದಿನಾಂಕ 1.1.96ರಿಂದ ಜಾರಿಗೆ ಬರುವಂತೆ ವಿಸ್ತರಿಸಲಾಗಿದೆ.

ಆ) ರಾಜ್ಯದಲ್ಲಿರುವ ಪೋಷಿತ ಮತ್ತು ಅಪೋಷಿತ ಕೊಳಚೆ ಪ್ರದೇಶಗಳಲ್ಲಿ ಸಮೀಕ್ಷೆ ನಡೆಸಿದಾಗ್ಗೆ 5.92.972 ಅರ್ಜ ಫಲಾನುಭವಿಗಳೆಂದು ಗುರುತಿಸಲಾಗಿದೆ. ನಗರವಾರು ಮಾಹಿತಿ ಸದ್ಯಕ್ಕೆ ಲಭ್ಯವಿಲ್ಲ.

ಇ) ಸರ್ಕಾರವು ಮಾಹೆಯಾನ ರೂ.1.69 ಕೋಟಿ ರೂಪಾಯಿಗಳನ್ನು ಅಥವಾ ವಾರ್ಷಿಕ 20.26 ಕೋಟಿ ರೂಪಾಯಿಗಳನ್ನು ಹೆಚ್ಚುವರಿ ಸಹಾಯಧನ ಭರಿಸಬೇಕಾಗುತ್ತದೆ.